# 2

# ಇದು ಯಾವದರ ಕುರಿತಾಗಿದೆ?

# (1:8)

ಅಪೊಸ್ತಲರ ಕೃತ್ಯಗಳ ಸರಳವಾದ ರೂಪು ರೇಖೆಯು 1:8 ರಲ್ಲಿದೆ: (1) ಯೆರೂಸಲೇಮಿನಲ್ಲಿ ಸಾಕ್ಷಿ (1-7), (2) ಪಾಲಿಸ್ತೆನಿನ ಇತರ ಕಡೆಗಳಲ್ಲಿ ಸಾಕ್ಷಿ (8-12), (3) ಭೂಮಿಯ ಕಟ್ಟಕಡೆಯ ವರೆಗೆ ಸಾಕ್ಷಿ (13-28). ಮೊದಲ ಮತ್ತು ಎರಡನೇಯ ಭಾಗಗಳನ್ನು ಕ್ರೂಢಿಕರಿಸಿ ಕೆಲವರು ಪುಸ್ತಕವನ್ನು ವಿಭಜಿಸುತ್ತಾರೆ. 1:8ರ ಮೊದಲ ಎರಡು ಭಾಗಗಳನ್ನು ಉಪಯೋಗಿಸಿ, ಕೆಲವರು ಪುಸ್ತಕವನ್ನು ನಾಲ್ಕು ಭಾಗ ಮಾಡುತ್ತಾರೆ. ಆದರೆ 13-28ನ್ನು ಎರಡು ಭಾಗ ಮಾಡಿರುತ್ತಾರೆ: (3) ಪೌಲನ ಸುವಾರ್ತಾ ಪ್ರಯಾಣಗಳು (13-21) ಮತ್ತು (4) ಪೌಲನ ಸೆರೆ ಮತ್ತು ರೋಮಕ್ಕೆ ಪ್ರಯಾಣ (22-28). ಇನ್ನಿತರರು ಸಂಪೂರ್ಣವಾಗಿ ಬೇರೆ ರೀತಿಯ ವಿಭಜನೆಯನ್ನು ಉಪಯೋಗಿಸುತ್ತಾರೆ. ಉದಾಹರಣೆಗೆ, ಕೆಲವರು ಲೂಕನ "ಮುಕ್ತಾಯದ ಹೇಳಿಕೆಗಳನ್ನು" ಸಹಜವಾಗಿರುವ ಅಂಶಗಳಾಗಿ ಉಪಯೋಗಿಸುತ್ತಾರೆ (ಅಪೊಸ್ತಲರ ಕೃತ್ಯಗಳು 6:7; 9:31; 12:24; 16:5; 19:20; 28:30, 31), ಈ ಕಾರಣದಿಂದ ಆರು ಭಾಗಗಳು ಕಂಡುಬರುತ್ತವೆ.

ನಮ್ಮ ಅಧ್ಯಾಯನದ ಉದ್ದೇಶಕ್ಕಾಗಿ, ನಾವು ಅಪೊಸ್ತಲರ ಕೃತ್ಯಗಳು 1:8ರ ಮೂರು ಭಾಗಗಳನ್ನು ಉಪಯೋಗಿಸುತ್ತೇವೆ, ಮತ್ತು ಮೂರನೆಯ ಅಂಶದಲ್ಲಿ ಇನ್ನೊಂದು ವಿಭಜನೆಯನ್ನು ಮಾಡುತ್ತೇವೆ:

I. ಯೆರೂಸಲೇಮಿನಲ್ಲಿ ಸಾಕ್ಷಿ (1-7)
II. ಪಾಲೆಸ್ತಿನಿನ ಇತರ ಭಾಗಗಳಲ್ಲಿ ಸಾಕ್ಷಿ (8-12)
III. ಭೂಮಿಯ ಕಟ್ಟಕಡೆಯ ವರೆಗೆ ಸಾಕ್ಷಿ (13-28)
    A. ಪೌಲನ ಸುವಾರ್ತಾ ಪ್ರಯಾಣಗಳು (13-21)
    B. ಪೌಲನ ಸೆರೆ ಮತ್ತು ರೋಮಕ್ಕೆ ಅವನ ಪ್ರಯಾಣ (22-28)[1]

## ಮುಖ್ಯ ವಿಷಯಗಳು

ಅಪೊಸ್ತಲರ ಕೃತ್ಯ ಪುಸ್ತಕವನ್ನು ಅನೇಕ ಹಂತಗಳಲ್ಲಿ ಕಲಿಯಬಹುದು. ಅದರ ಬಹು ಮುಖ್ಯ ಪಾಠಗಳಲ್ಲಿ ಕೇವಲ ಒಂದನ್ನು ಮಾತ್ರ ಒತ್ತು ಕೊಟ್ಟು, ಈ ಪುಸ್ತಕವನ್ನು ಸಂಪೂರ್ಣವಾಗಿ ಲಾಭದಾಯಕವಾಗಿ ಒಬ್ಬರು ಕಲಿಯಬಹುದು. ಮತ್ತು ತಕ್ಷಣವೇ ಇನ್ನೊಂದು ರೀತಿಯಲ್ಲಿ ಅದನ್ನೇ ಮತ್ತೆ ಕಲಿಯಬಹುದು. ಅಪೊಸ್ತಲರ ಕೃತ್ಯವನ್ನು ನಾವು ಧ್ಯಾನಿಸುವಂತೆ ಇಲ್ಲಿ ಕೆಲವು ಸೂಚನೆಗಳಿವೆ:

### 1. ಘತ ಕಾಲಗಳು

ಅಪೊಸ್ತಲರ ಕೃತ್ಯವನ್ನು ಇತಿಹಾಸವೆಂದು ದೃಷ್ಟಿಸಬಹುದು ಮತ್ತು ಗತಕಾಲದ ದೃಷ್ಟಿಕೋನದಿಂದ ಅದನ್ನು ಧ್ಯಾನಿಸಬಹುದು: ಯಾವಾಗ, ಎಲ್ಲಿ ಮತ್ತು ಯಾಕೆ ಏನಾಯಿತು? ಇದು ಒಂದು ಆಕರ್ಷಕ ಅಧ್ಯಯನವಾಗುತ್ತದೆ, ವಿಶೇಷವಾಗಿ *ಜನರನ್ನು* ಕೇಂದ್ರವಾಗಿ ಇಟ್ಟರೆ. ಲೂಕನ ಇತಿಹಾಸವು ತಣ್ಣಗಾದ ಮತ್ತು ವೈಯಕ್ತಿಕವಲ್ಲದ ಇತಿಹಾಸವಾಗಿರಲಿಲ್ಲ. ಅವನು ಅದನ್ನು ದೇವ ಜನರನ್ನು ಇತ್ತೇಜಿಸುವ ಸಾಧನವಾಗಿ ಉಪಯೋಗಿಸಿದನು.

ಹಳೇ ಒಡಂಬಡಿಕೆಯಲ್ಲಿ ಇತಿಹಾಸದ ಮಹಾ ಲೇಖಕರ ಹೆಜ್ಜೆ ಜಾಡಿನಲ್ಲಿ ತಾನು ನಡೆಯುತ್ತಿರುವದಾಗಿ ಲೂಕನು ತನ್ನನ್ನು ಪರಿಗಣಿಸಿದ್ದರಲ್ಲಿ ಯಾವ ಸಂಶಯವಿಲ್ಲ. ಅವನು ಕೇವಲ ಇತಿಹಾಸವನ್ನು ಬರೆಯಲಿಲ್ಲ; ಅವನು ಒಂದು ಪವಿತ್ರ ಇತಿಹಾಸವನ್ನು ಬರೆದನು. ಪವಿತ್ರಾತ್ಮನ,[2] ದೇವದೂತರ,[3] ಪ್ರೇರಿತರಾದ ಪ್ರವಾದಿಗಳ ಮೂಲಕ,[4] ಅಷ್ಟೇ ಅಲ್ಲದೇ ಯೇಸುವಿನ ವಿಶೇಷ ಕಾಣಿಸಿಕೊಳ್ಳುವಿಕೆಯ ಮೂಲಕವೂ, ದೇವರು ಜನರ ಜೀವಿತದಲ್ಲಿ ಚಲಿಸಿದನು![5]

### 2. ತತ್ವಗಳು

ಅಪೊಸ್ತಲರ ಕೃತ್ಯವನ್ನು ದೈವಿಕ ನಿಯಮಗಳು ಅಥವಾ ತತ್ವಗಳ ದೃಷ್ಟಿಕೋನದಿಂದಲೂ ಕಲಿಯಬಹುದು. ಪುಸ್ತಕದಲ್ಲಿ ನಾವು *ರಕ್ಷಣೆಯ* ಕುರಿತು ಸತ್ಯವನ್ನು ಕಾಣುತ್ತೇವೆ. ದೇವರ ವಾಕ್ಯವು ಸಾರಲ್ಪಟ್ಟಿತು. (ಅಪೊಸ್ತಲರ ಕೃತ್ಯದಲ್ಲಿ ದೇವರ ವಾಕ್ಯದ ಸುಮಾರು ನಾಲ್ವತ್ತು ದಾಖಲೆಗಳಿವೆ.) ಬೋಧನೆಯು ಕ್ರಿಸ್ತನ ಕುರಿತು ಕೇಂದ್ರಿಕೃತವಾಗಿವೆ. ಬಯಸಿದ ಪ್ರತಿ ಕ್ರೀಯೆಯು (ನಂಬಿಕೆ, ಪಶ್ಚಾತಾಪ, ದೀಕ್ಷಾಸ್ನಾನ) ಮತ್ತು ಪ್ರತಿಷ್ಠೆಯು - ಕರ್ತನಿಗಾಗಿ ಇತ್ತು!

ರಕ್ಷಣೆಯ ವಿಷಯಕ್ಕೆ ಸಂಬಂಧಿಸಿ, ಅಪೋಸ್ತಲರ ಕೃತ್ಯದಲ್ಲಿ ಕ್ರೈಸ್ತ ಸಭೆಯ ಸತ್ಯವು ಕಂಡುಬರುತ್ತದೆ. ಸುವಾರ್ತೆಗಳಲ್ಲಿ, "ದೇವರ ರಾಜ್ಯ,"[6] ಎನ್ನುವದು ಮುಖ್ಯ ಪದವಾಗಿದೆ, ಕ್ರೈಸ್ತ ಸಭೆಯ ಕುರಿತು ಅಲ್ಪ ಸೂಚಿಗಳಿವೆ. ಅಪೊಸ್ತಲರ ಕೃತ್ಯದಲ್ಲಿ ಮುಖ್ಯ ಪದವು "ಕ್ರೈಸ್ತ ಸಭೆಯಾಗಿದೆ." ಅಪೊಸ್ತಲರ ಕೃತ್ಯದಲ್ಲಿ, "ಸಭೆ" ಎಂಬ ಪದವು ಸುಮಾರು ಇಪ್ಪತ್ತು ಬಾರಿ ಕಾಣುತ್ತೇವೆ, "ದೇವರ ರಾಜ್ಯ"[7] ಎಂಬ ಪದಕ್ಕೆ ಸೂಚಿಯು ಆಗಾಗ್ಗೆ ನಮೂದಿಸಲ್ಪಟ್ಟಿದೆ. ಅಪೊಸ್ತಲರ ಕೃತ್ಯದಲ್ಲಿ ನಾವು ಸಭೆಯ ಆರಾಧನೆ, ಸಭೆಯ ಕಾರ್ಯಗಳು, ಸಭೆಯ ಅಧಿಕೃತ ರಚನೆ, ಸಭೆಯ ಐಕ್ಯತೆ ಮತ್ತು ಸಭೆಯ ಶಿಸ್ತಿನ ಕುರಿತು ಕಲಿಯುತ್ತೇವೆ.

ಮಾತ್ರವಲ್ಲದೇ, ಅಪೊಸ್ತಲರ ಕೃತ್ಯದಲ್ಲಿ ಪವಿತ್ರಾತ್ಮನ ಕುರಿತ ದೇವರ ಸತ್ಯಗಳನ್ನು ಶೊಧಿಸುತ್ತೇವೆ. ಪವಿತ್ರಾತ್ಮನ ಉದ್ದೇಶವು ತನ್ನನ್ನು ಪ್ರಕಟ ಮಾಡಿಕೊಳ್ಳುವದಲ್ಲದಿದ್ದರೂ, ಪವಿತ್ರಾತ್ಮನ ಕಾರ್ಯದ ಕುರಿತು ಐವತ್ತು ಭಾಗಗಳಿಗಿಂದ ಹೆಚ್ಚು ಕಾಣುತ್ತೇವೆ. ಈ ಪುಸ್ತಕದಿಂದ ನಾವು, ಪವಿತ್ರಾತ್ಮನ ಅದ್ಭುತ/ಚಮತ್ಕಾರಕ ಮತ್ತು ಅದ್ಭುತವಲ್ಲದ ಕಾರ್ಯಗಳನ್ನು ಕಾಣುತ್ತೇವೆ.[8]

### 3. ಬೋಧನೆ

ಪ್ರಸಂಗದ/ಬೋಧನೆಯ ದೃಷ್ಟಿಯಿಂದ ಅಪೊಸ್ತಲರ ಕೃತ್ಯವನ್ನು ನಾವು ಕಲಿಯಬಹುದು. ಪುಸ್ತಕದಲ್ಲಿನ ಪ್ರಸಂಗಗಳನ್ನು ನಾವು ವಿಶ್ಲೇಷಿಸುವದರಲ್ಲಿ ಬೆಲೆಯಿದೆ. ಪ್ರೇರೇಪಿಸಲ್ಪಟ್ಟ ಬೋಧಕರು, ಯೆಹೂದ್ಯ ಶ್ರೋತೃಗಳಿಗೆ ಬೋಧಿಸಿದರು, ಅನೇಕ ಹಿನ್ನಲೆಗಳಿದ್ದ ಅನ್ಯ ಶ್ರೋತೃಗಳನ್ನು ಅವರು ಭೇಟಿಯಾದರು ಮತ್ತು ಒಬ್ಬ ಸುವಾರ್ತಿಕನು ಸಭೆಯ ಹಿರಿಯರಿಗೆ ಬೋಧಿಸಿದನು (ಅಪೊಸ್ತಲರಕೃತ್ಯಗಳು 20:17-35)!

### 4. ಪ್ರಾರ್ಥನೆ

ಪ್ರಾರಂಭದ ಶಿಷ್ಯರು ಪ್ರಾರ್ಥಿಸಿದ ಸಂಧರ್ಭಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ದಾಖಲಿಸಿದ ಪ್ರಾರ್ಥನೆಗಳನ್ನು ವಿಶ್ಲೇಷಿಸಿ, ನಾವು ಪ್ರಾರ್ಥನೆಯ ವಿಷಯದ ದೃಷ್ಟಿಕೋನದಿಂದ ಅಪೊಸ್ತಲರ ಕೃತ್ಯವನ್ನು ಕಲಿಯಬಹುದು. ಯೇಸುವಿನ ಹಿಂಬಾಲಕರು ಮಾಡಿದ ಎಲ್ಲ ಕಾರ್ಯಗಳನ್ನು ಪ್ರಾರ್ಥನೆಯು ಪರಿಪೂರ್ಣಗೊಳಿಸುತ್ತದೆ.

### 5. ಪ್ರಗತಿ

ಆದಿ ಕ್ರೈಸ್ತ ಸಭೆಯು ಸಾಧಿಸಿದ ಸಂಖ್ಯಾ ಪ್ರಗತಿಯ ದೃಷ್ಟಿಕೊನದಿಂದ ಧ್ಯಾನಿಸಬಹುದು.

ಆದಿ ಕ್ರೈಸ್ತ ಸಭೆಯು ಆಶ್ಚರ್ಯಕರವಾಗಿ ಬೆಳೆಯಿತು![9] ಅದು ಅಷ್ಟು ವೇಗವಾಗಿ ಹೇಗೆ ಬೆಳೆಯಿತು? ಅದರ ಗುಟ್ಟು ಏನಾಗಿತ್ತು? ನಾವು ಈ ಪುಸ್ತಕವನ್ನು ಧ್ಯಾನಿಸುವಾಗ, ಕ್ರೈಸ್ತತ್ವವು ಹಬ್ಬುವದಕ್ಕೆ ಅಡ್ಡಿ ಮಾಡಿದ ವಿಷಯಗಳನ್ನು ಗಮನಿಸುತ್ತೇವೆ. ಉದಾಹರಣೆಗೆ, ಇತರರೊಂದಿಗೆ ಪ್ರತಿಯೊಬ್ಬ ಕ್ರೈಸ್ತನು ಸುವಾರ್ತೆಯನ್ನು ಹಂಚಲೇಬೇಕು ಎಂದು ಲೂಕನು ಒತ್ತುಕೊಟ್ಟನು. ಅಪೊಸ್ತಲರ ಕೃತ್ಯದಲ್ಲಿ, ಸಭೆಯ ಮುಖ್ಯ ಕಾರ್ಯವು, ಇತರರಿಗೆ ಯೇಸುವಿನ ಕುರಿತು ತಿಳಿಸುವದಾಗಿತ್ತು. ನಂತರ ಅಪೊಸ್ತಲರ ಕೃತ್ಯವು ಸುವಾರ್ತೆಯು ಸರ್ವರಿಗಾಗಿ ಎಂದು ಒತ್ತುಕೊಡುತ್ತದೆ. ಸುವಾರ್ತೆಯು ಅನ್ಯರಿಗೂ ಮತ್ತು ಯಹೂದ್ಯರಿಗೂ ಇದೆ ಎಂಬ ಅಂಶವನ್ನು ಈ ಪುಸ್ತಕದ ಹೆಚ್ಚಾದ ಭಾಗವು ಒಳಗೊಂಡಿದೆ. ಇದಕ್ಕೆ ಅಧಿಕವಾಗಿ ಸರ್ವ ವರ್ಗಗಳ ಜನರಿಗೆ ಸುವಾರ್ತೆ ಎಂದು ಈ ಪುಸ್ತಕವು ಒತ್ತುಕೊಡುತ್ತದೆ: ಶ್ರೀಮಂತರು ಅಥವಾ ಬಡವರು, ವಿದ್ಯಾವಂತರು ಅಥವಾ ಅವಿದ್ಯಾವಂತರು, ಪುರುಷರು ಅಥವಾ ಸ್ತ್ರೀಯರು, ಯೌವನಸ್ಥರು ಅಥವಾ ವೃದ್ಧರು, ನೈತಿಕ ಅಥವಾ ಅನೈತಿಕ. (ಪರಿವರ್ತನೆಯ ಉದಾಹರಣೆಗಳನ್ನು ಮತ್ತು ಪರಿವರ್ತನೆ ಹೊಂದಿದವರ ವೈವಿಧ್ಯತೆಯನ್ನು ಆಲೋಚಿಸಿರಿ.)

## ಕಾರ್ಯ

ಅಪೊಸ್ತಲರ ಕೃತ್ಯವನ್ನು ಲಾಭದಾಯಕವಾಗುವ ಹಾಗೆ ಪುನಃ ಪುನಃ ಬೇರೆ ಬೇರೆ ವಿಧದಲ್ಲಿ ನಾವು ಧ್ಯಾನಿಸಬಹುದೆಂದು ಗಮನಿಸಿದ್ದೇವೆ. ಆದರೆ, ಈ ವಸ್ತು ವಿಷಯವನ್ನು ಧ್ಯಾನಿಸಲು ಒಂದೇ ಅವಕಾಶವಿರುತ್ತದೆ. ಆದುದರಿಂದ ನಾನು, ನಮೂದಿಸಲ್ಪಟ್ಟ ಎಲ್ಲಾ ಮುಖ್ಯ ವಿಷಯಗಳನ್ನು ಮತ್ತು ಇತರ ಸಂಗತಿಗಳನ್ನು ನಾನು ಪ್ರಸ್ತಾಪಿಸುವಂತೆ ಪ್ರಯತ್ನಿಸುತ್ತೇನೆ. ನಾನು *ಎಲ್ಲಾ* ವಿಷಯಗಳಿಗೆ ನ್ಯಾಯ ಒದಗಿಸಲು ಸಾಧ್ಯವಾಗದಿದ್ದರೂ, ಧ್ಯಾನದ ಸಾಧ್ಯವಾದ ಭಾಗಗಳಲ್ಲಿ ನಿಮ್ಮ ಆಲೋಚನೆಯನ್ನು ಪ್ರಚೋದಿಸುತ್ತೇನೆ. ನೀವು ನಂತರ ನಿಮ್ಮ ಜೀವನದ ಉಳಿದ ದಿನಗಳನ್ನು ಈ ಮಹಾ ಪುಸ್ತಕದ ಆಳಕ್ಕೆ ಅಗಿಯುವದರಲ್ಲಿ ಕಳೆಯಬಹುದು.

ಅಪೊಸ್ತಲರ ಕೃತ್ಯವನ್ನು ಬೋಧಿಸುವ ಅನೇಕ ಗ್ರಂಥಗಳಂತೆ ಇರದೇ, ನನ್ನ ವಿಧಾನವು *ಧರ್ಮೋಪದೇಶದ* ರೀತಿಯಲ್ಲಿದೆ, ಹೀಗಾಗಿ ಈ ವಸ್ತು ವಿಷಯವನ್ನು ಪೀಠದಿಂದಲೂ ಮತ್ತು ತರಗತಿಗಳಲ್ಲಿಯೂ ಉಪಯೋಗಿಸಬಹುದು. ನಾನು ಪ್ರಾರಂಭಿಸಿದಾಗ, ನನ್ನ ಮೂಲ ಯೋಜನೆಯು, ಒಬ್ಬರು ಬಯಸುವದಾದರೆ, ಆರು ತರಗಳಲ್ಲಿ ಈ ವಸ್ತುವಿಷಯವನ್ನು ಧ್ಯಾನಿಸುವಂತೆ, ಇಪ್ಪತ್ತಾರು ಪಾಠಗಳಲ್ಲಿ ಈ ಪುಸ್ತಕವನ್ನು ಮುಗಿಸಬೇಕೆಂದಿತ್ತು (ಪ್ರಾಸ್ತಾವಿಕವನ್ನು ಹೊರತುಪಡಿಸಿ). ಆದರೆ ಕೆಲವು ಪಾಠಗಳು ಬಹು ಉದ್ದವಾಗಿಯೂ, ಸ್ಥೂಲವಾಗಿಯು ಆದದ್ದನ್ನು ನಾನು ಬೇಗನೆ ಗಮನಿಸಿ, ಅದರಿಂದ ಎರಡು ಅಥವಾ ಹೆಚ್ಚು ಪಾಠಗಳನ್ನು ಮಾಡಬೇಕಾಯಿತು. ಅಪೊಸ್ತಲರ ಕೃತ್ಯದಲ್ಲಿ ಇಪ್ಪತ್ತೆಂಟು ಅಧ್ಯಾಯಗಳಿರುವದರಿಂದ ಮತ್ತು ಅನೇಕ ಅಧ್ಯಾಯಗಳು ಮಹಾ ಸತ್ಯದಿಂದ ತುಂಬಿರುವದರಿಂದ, ನನ್ನ ಅನೇಕ ಪಾಠಗಳು ಒಂದು ಸಾಮಾನ್ಯ ತರಗತಿಗೂ ಅಥವಾ ಪ್ರಸಂಗಕ್ಕೂ ಬಹು ಉದ್ದವಾಗಿಯೂ ಇರುತ್ತವೆ. ನೀವು ಲಭ್ಯವಿರುವ ವಸ್ತು ವಿಷಯಗಳಿಂದ ಆಯ್ದು ತೆಗೆದುಕೊಳ್ಳಬೇಕು. ನಿಮ್ಮ ಆಯ್ಕೆಗಳಲ್ಲಿ ನಿಮ್ಮ ವಿದ್ಯಾರ್ಥಿಗಳ ತಕ್ಷಣದ ಆತ್ಮಿಕ ಅವಶ್ಯಕತೆಯು ಮುಖ್ಯ ಅಂಶವಾಗಿರಬೇಕು.

ನನ್ನ ಬರಹವು ಧರ್ಮೋಪದೇಶವಾಗಿದ್ದರೂ, ನಾನು ಈ ಭಾಗದ ಎಲ್ಲ ಮುಖ್ಯ ಅಂಶಗಳನ್ನು ಸಾಕಾಗುವಷ್ಟು ವಿವರಿಸಲು ಬಯಸುತ್ತೇನೆ. ಈ ಅಂಶಗಳು ಈ ಪಾಠದಲ್ಲಿ ಸಹಜವಾಗಿ ವಿವರಿಸಲ್ಪಡದಿದ್ದರೆ, ನಾನು ಅವುಗಳನ್ನು ಅಡಿ ಟಿಪ್ಪಣಿ ಅಥವಾ ಸಾಹಯಕ ಲೇಖನದಲ್ಲಿ ವಿವರಿಸಲು ಪ್ರಯತ್ನಿಸುತ್ತೇನೆ. ಈ ಸರಣಿಯಲ್ಲಿನ ಲೇಖನಗಳು ನಂತರ ಇನ್ನು ಶಾಶ್ವತ ರೂಪದಲ್ಲಿ ತೋರಿಬರುವದರಿಂದ, ನಾನು ವಿವರಿಸುವದರಲ್ಲಿ ವಿಫಲನಾದ ಸಂಗತಿಗಳನ್ನು ನೀವು ನನಗೆ ತಿಳಿಸಿದರೆ ಅಲ್ಪ ಸೇವೆಯಾಗುತ್ತದೆ. ನೀವು ಮಾಡುವ *ಯಾವುದೇ* ಹೇಳಿಕೆಗಳನ್ನು ಪ್ರಶಂಶಿಸುತ್ತೇನೆ.

ಈ ಲೇಖನವನ್ನು ಇನ್ನೂ ಹೆಚ್ಚು ಪ್ರಾಯೋಗಿಕವಾಗಿ ಮಾಡುವದಕ್ಕೆ, ಈ ಲೇಖನವನ್ನು ಬೇರೆ ರೀತಿಯಲ್ಲಿ ಹೇಗೆ ವಿವರಿಸಬಹುದು ಎಂದು ನಾನು ಪ್ರಸಂಗದ ಟಿಪ್ಪಣಿಗಳನ್ನು ಸೇರಿಸುತ್ತೇನೆ, ಮತ್ತ ಅಧಿಕವಾಗಿ ಇಲ್ಲಿನ ಮಾಹಿತಿಗಳನ್ನು ಹೇಗೆ ಚಿತ್ರಿಸಿಕೊಳ್ಳಬಹುದು ಎಂದೂ ಟಿಪ್ಪಣಿಗಳನ್ನು ಕೊಡುತ್ತೇನೆ. ಸ್ಥಳಾವಕಾಶವಿದ್ದರೆ, ನಾನು ಕೆಲವು ಸಹಾಯಕ ಲೇಖನಗಳನ್ನು ಸೇರಿಸುತ್ತೇನೆ. ಈ ಲೇಖನ "ಸಂಗ್ರಹವು," ಬಹು ಬೆಲೆಯುಳ್ಳ ಅಪೊಸ್ತಲರ ಕೃತ್ಯ ಪುಸ್ತಕದ ಮೇಲೆ ಬೋಧಿಸಲು ಮತ್ತು ಕಲಿಸಲು ಉತ್ತೇಜಿಸುತ್ತದೆಂದು ನಾನು ನಿರೀಕ್ಷಿಸುತ್ತೇನೆ.

ಈ ಲೇಖನವನ್ನು ಸಿದ್ಧ ಪಡಿಸಲು ನಾನು ಅನೇಕ ಮೂಲಗಳ ಮೇಲೆ ಅವಲಂಭಿಸಿದ್ದೇನೆ, ಅಡಿ ಟಿಪ್ಪಣಿಗಳನ್ನು ನೀವು ಗಮನಿಸಿದರೆ ಅದನ್ನು ಅರ್ಥೈಸಿಕೊಳ್ಳಬಹುದು. ಅಪೊಸ್ತಲರ ಕೃತ್ಯವನ್ನು ನಾನು ಸುಮಾರು ನಾಲ್ವತ್ತು ವರ್ಷಕ್ಕಿಂತ ಹೆಚ್ಚು ಕಾಲ ಬೋಧಿಸುತ್ತಾ ಮತ್ತು ಕಲಿಸುತ್ತಾ ಬಂದಿರುವದರಿಂದ, ಈ ಪುಸ್ತಕವನ್ನು ನಾನು ಅರ್ಥಮಾಡಿಕೊಳ್ಳಲು ಸಹಾಯ ಮಾಡಿದ ಎಲ್ಲರಿಗೂ ನನ್ನ ಕೃತಜ್ಞತೆ ಸಲ್ಲಿಸಿದರೂ ಸಾಲದು. ಆದಾಗ್ಯೂ, 1954ರ ವಸಂತಕಾಲದಲ್ಲಿ, ಅಬಿಲೇನ್ ಕ್ರಿಸ್ತಿಯನ್ ಯುನಿವರ್ಸಿಟಿಯಲ್ಲಿ ಅಪೊಸ್ತಲರ ಕೃತ್ಯದ ಮೇಲೆ ಅಧ್ಯಾಯನ ಮಾಡುವಾಗ ನನ್ನ ಶಿಕ್ಷಕರಾದ ಜೆ. ಡಬ್ಲ್ಯು ರಾಬರ್ಟ್ಸ್ ಅವರನ್ನು ನಾನು ನೆನಪು ಮಾಡಬೇಕು. ಮತ್ತು ನಾನು ಅನೇಕ ವರ್ಷಗಳಿಂದ ಹೆಚ್ಚಾಗಿ ಉಪಯೋಗಿಸುವ ಸೂಚಿಗಳಿಗಾಗಿ J. W. McGarvey's classic *New Commentary on Acts of Apostles*.[10] ಪುಸ್ತಕವನ್ನು ಉಪಯೋಗಿಸಿದ್ದೆನೆ. ಈ ಸರಣಿಗಾಗಿ, ನಾನು ಸಮಯಾವಕಾಶ ದೊರೆತ ಹಾಗೆ ಆಳವಾದ ಅಧ್ಯಯನ ಮಾಡಿ, ಮೊದಲ ಬಾರಿ ಧ್ಯಾನ ಮಾಡುವವನಂತೆ ಪ್ರಯತ್ನಿಸಿದನು.

## ಮುಕ್ತಾಯ

ಅಪೊಸ್ತಲರ ಕೃತ್ಯದಲ್ಲಿ ವಿವರಿಸಲ್ಪಟ್ಟ ವರ್ಷಗಳಲ್ಲಿ, ಯೇಸು ಕೇವಲ "ಮಾಡುವದಕ್ಕೂ ಉಪದೇಶಿಸುವದಕ್ಕೂ" ತೊಡಗಲಿಲ್ಲ. ಆತನು ತನ್ನ ದೇಹ, ಕ್ರೈಸ್ತ ಸಭೆಯಲ್ಲಿ ತನ್ನ ಪ್ರಸನ್ನತೆಯಿಂದ ಜೀವಿಸುತ್ತಾನೆ![11] ಆತನು ನಮ್ಮ ಮೂಲಕ ಕಾರ್ಯ ಮಾಡುತ್ತಾನೆ. ನಾವು ಆತನ ಕಣ್ಣು, ಕಿವಿ, ಕೈಗಳು ಮತ್ತು ಕಾಲುಗಳಾಗಿದ್ದೇವೆ (1 ಕೊರಿಂಥ 12:12-27). ತನ್ನ ಪರಲೋಕದ, ನಿತ್ಯವಾದ ದಾಖಲೆಯಲ್ಲಿ ದೇವರು ತನ್ನ ಸಭೆಯ ಇತಿಹಾಸವನ್ನು ಇನ್ನೂ ಬರೆಯುತ್ತಿದ್ದಾನೆ. ಅವನು ಗ್ರಂಥ 20ನ್ನು ಮುಕ್ತಾಯಗೊಳಿಸಿ 21ನ್ನು ಪ್ರಾರಂಭಿಸಲು ಸಿದ್ಧನಾಗುತ್ತಿದ್ದಾನೆ.[12] ಆತನು ಬರೆಯುತ್ತಿರುವದರ ಕುರಿತು ಆತನಿಗೆ ಸಂತೋಷವಿದೆಯೆಂದು ನೀವು ನೆನೆಪಿಸುತ್ತೀರೋ? ಕೇವಲ ಹೊಸ ಒಡಂಬಡಿಕೆಯ ಕ್ರೈಸ್ತರ ತತ್ವವನ್ನು ಪುನಶ್ಚೇತನಗೊಳಿಸಲು ಮಾತ್ರವಲ್ಲ, ಅವರ ಅತ್ಮ ಮತ್ತು ಉತ್ತೇಜನವನ್ನೂ ಪುನಶ್ಚೇತನಗೊಳಿಸುವಂತೆ ದೇವರು ನಮಗೆ ಸಹಾಯ ಮಾಡಲಿ! ಈ ಅಧ್ಯಯನವು ಈ ದಿಕ್ಕಿನಲ್ಲಿ ಸಹಾಯ ಮಾಡಲಿ ಎಂದು ಪ್ರಾರ್ಥಿಸುತ್ತೇನೆ!

## ಪ್ರಸಂಗದ ಟಿಪ್ಪಣಿ

ನೀವು ಅಪೊಸ್ತಲರ ಕೃತ್ಯದ ಪರಿಚಯವನ್ನು ನಿಮ್ಮ ಪಾಠಗಳ ಅಥವಾ ಪ್ರಸಂಗದ ಸರಣಿಗೆ ನೀವು ಸೇರಿಸಲು ಬಯಸುವದಾದರೆ, "ಕಾರ್ಯಗಳು" ಎಂಬ ತಲೆಬರಹದ ಭಾಗವನ್ನು ಉಪಯೋಗಿಸಬಹುದು.

ಇದರಿಂದ ನೀವು ಲೇಖನವನ್ನು ಹೇಗೆ ವಿವರಿಸಲು ಯೋಜಿ ಸಿದ್ದೀರಿ ಎಂದು ಹೇಳ ಬಹುದು. ಡಾನ್ ವಿಲ್ಲಿಂಗ್‌ಹ್ಯಾಮ್ ಅವರ ಪ್ರಸಂಗ "ಟರ್‌ನಿಂಗ್ ದ ವರ್ಲ್ಡ್ ಅಪಸೈಡ್ ಡೌನ್,"

60ರ ಕೊನೆಯ ಭಾಗದಲ್ಲಿ ಕ್ರೈಸ್ತ ಮುದ್ರಣಾಲಯದಿಂದ ದಾಖಲಿಸಲ್ಪಟ್ಟಿತು. ಈ

ಪಾಠದಲ್ಲಿ, ಡಾನ್ ಅವರು ಆದಿ ಕ್ರೈಸ್ತ ಸಭೆಯು ಹೇಗೆ ಬಲವಾಗಿ ಮತ್ತು ಯಶಸ್ವಿಯಾಗುವದಕ್ಕೆ ಕಾರಣವೇನು ಎಂದು ಹೇಳಿದ್ದಾರೆ ಮತ್ತು ನಾವು ಅದರ ಉದಾಹರಣೆಯನ್ನು ಅನುಸರಿಸ ಬೇಕೆಂದು ಸೂಚಿಸಿದ್ದಾರೆ. ಅವರ ಹೇಚ್ಚಾದ ಲೇಖನಗಳು ಅಪೊಸ್ತಲರ ಕೃತ್ಯದಿಂದ ತೆಗೆದುಕೊಳ್ಳಲಾಗಿದೆ. ಅವರು ಭಾವನೆಗಳ ಮೇಲೆ ಹೆಚ್ಚು ಒತ್ತುಕೊಟ್ಟಿದ್ದಾರೆ: ಕ್ರೈಸ್ತತ್ವದ, ಅವರ ಜೀವನದ, ಇತರರ, ಬೋಧನೆಯ ಮತ್ತು ಪ್ರಾರ್ಥನೆಯ ಕಡೆಗೆ ಆದಿ ಕ್ರೈಸ್ತರ ಭಾವನೆ. ಪುಸ್ತಕವನ್ನು ನೀವು ಧ್ಯಾನಿಸುವಾಗ, ಆದಿ ಕ್ರೈಸ್ತ ಸಭೆಯ, ಇಂದು ನಮಗೆ ಅವಶ್ಯವಿರುವ ಗುಣಗಳನ್ನು ಗಮನಿಸಿರಿ. ಈ ಅಂಶಗಳ ಮೇಲೆ ನಿಮ್ಮ ಪಾಠಗಳನ್ನು ಅಭಿವೃದ್ಧಿಗೊಳಿಸಿರಿ.

ಮೊದಲ ಶತಮಾನದಲ್ಲಿ ಕ್ರೈಸ್ತರ ಹೋರಾಟಗಳು ಮತ್ತು ಜಯಗಳ ಕುರಿತ ಚಲನಚಿತ್ರವನ್ನು ವೀಕ್ಷಿಸಿ ಒಬ್ಬ ತಂದೆ ಮತ್ತು ಮಗ ಚಲನಚಿತ್ರ ಮಂದಿರದಿಂದ ಹೊರಬಂದರು. ಹುಡುಗನು ಮೇಲೆ ನೋಡಿ ಹೀಗೆ ಹೇಳಿದನು, “ಅಪ್ಪಾ, ಅಂದು ಕ್ರೈಸ್ತನಾಗಿರುವದು ಬಹು ರೋಮಾಂಚನಕಾರಿಯಾಗಿತ್ತು ಅಲ್ಲವೇ?” ... ಆ ಹುಡುಗನ ಮಾತಿನಲ್ಲಿ ಬೋಧಕರು, ಉಪದೇಶಕರು ಮತ್ತು ನಾಯಕರ ಕುರಿತು ಎಂಥ ಆಪಾದನೆ ಇದೆ: “ಅಪ್ಪಾ, ಅಂದು ಕ್ರೈಸ್ತನಾಗಿರುವದು ಬಹು ರೋಮಾಂಚನಕಾರಿಯಾಗಿತ್ತು ಅಲ್ಲವೇ.” ಇಂದು ನಾವು ಕ್ರೈಸ್ತತ್ವವನ್ನು ಪ್ರತಿಬಿಂಬಿಸುತ್ತಿರುವಂತೆ, ರೋಮಾಂಚನ ಮತ್ತು ಉತ್ಸಾಹವನ್ನು ತರುವಲ್ಲಿ ವಿಫಲರಾಗಿದ್ದೇವೆಯೋ?

---

ಟಿಪ್ಪಣಿಗಳು

[1]ಈ ಪುಸ್ತಕದಲ್ಲಿ ಸಂಕ್ಷೇಪ ವಿವರಣೆ ಸೇರಿಸಲಾಗಿದೆ. [2]ಅಪೊಸ್ತಲರ ಕೃತ್ಯಗಳು 13:2; 15:28; 16:6. [3]ಅಪೊಸ್ತಲರ ಕೃತ್ಯಗಳು 5:19, 20; 8:26; 27:23. [4]ಅಪೊಸ್ತಲರ ಕೃತ್ಯಗಳು 11:28; 20:11, 12. [5]ಅಪೊಸ್ತಲರ ಕೃತ್ಯಗಳು 18:9; 23:11. [6]ಇದಕ್ಕೆ ಕಾರಣವೇನೆಂದರೆ, ಹಳೆ ಒಡಂಬಡಿಕೆಯ ಪ್ರವಾದಿಗಳ ಮುಖ್ಯ ಒತ್ತು, ಮೆಸ್ಸಿಯನು ರಾಜ್ಯವನ್ನು ಕಟ್ಟುವನು ಎಂಬುದಾಗಿತ್ತು. [7]ಸಹಸ್ರವರ್ಷದ ಪೂರ್ವದಲ್ಲಿ ನಂಬಿಕೆ ಇಡುವವರು ಹೇಳುವಂತೆ, ದೇವರು ರಾಜ್ಯವನ್ನು ಸ್ಥಾಪಿಸುವದಕ್ಕೆ ನಿರ್ಧರಿಸದೇ, ಸಭೆಯನ್ನು ಸ್ಥಾಪಿಸುವದಕ್ಕೆ ನಿರ್ಧರಿಸಿದ್ದುದೇ ಕಾರಣ. ಕ್ರಿಸ್ತನ ಪುನರುತ್ಥಾನದ ನಂತರದ ಪ್ರಥಮ ಪಂಚಾಶತ್ತಮ ದಿನದಲ್ಲಿ ಸ್ಥಾಪಿಸಲ್ಪಟ್ಟ ಸಭೆಯು ಹಳೇ ಒಡಂಬಡಿಕೆಯ ಪ್ರವಾ ದಿಗಳು ಮುಂತಿಳಿಸಿದ ನಿಜವಾದ ರಾಜ್ಯವೆಂದು ಹೇಳಲಾಗುತ್ತದೆ. [8]ಅಪೊಸ್ತಲರ ಕೃತ್ಯಗಳಲ್ಲಿ ಪವಿತ್ರಾತ್ಮನ ಕಾರ್ಯಗಳ ಕುರಿತ ಸಹಾಯಕ ಲೇಖನಗಳು ಈ ಲೇಖನ ಮಾಲೆಯ ಕೊನೆಯ ಭಾಗದಲ್ಲಿ ಬರುತ್ತದೆ. [9]ಲೂಕನ ಆರು “ಸಂಕ್ಷೆಪ ಹೇಳಿಕಗಳನ್ನು” ಓದಿರಿ. (6:7; 9:31; 12:24; 16:5; 19:20; 28:30, 31) ಪ್ರತಿಯೊಂದೂ ಬೆಳವಣಿಗೆಯ ಸಂಕ್ಷಿಪ್ತಬರಹವಾಗಿದೆ. [10]J. W. McGarvey, *New Commentary on Acts of Apostles* (Delight, Ark.: Gospel Light Publishing Co., n.d.). ಮೆಕ್ ಗ್ರೇವಿಯವರ ವಿವರಣೆಯು ಪ್ರತಿಯೊಂದು ಗ್ರಂಥಾಲಯದಲ್ಲಿರುವದು ಅವಶ್ಯ. ಅದರಲ್ಲಿರುವ ಕೆಲವು ವಿಷಯಗಳು ಪುರಾತನವಾ ಗಿರಬಹುದು ಆದರೆ, ಅಪೊಸ್ತಲರ ಕೃತ್ಯಕ್ಕೆ ಅಮೂಲ್ಯವಾದ ಒಳನೋಟವನ್ನು ಮೂಲವಾಗಿದೆ.

[11]ಎಫೆಸ 1:22, 23 ದೇಹವು ಸಭೆಯಾಗಿದೆ ಎಂದು ಗಮನಿಸುತ್ತದೆ. [12]ಇಪ್ಪತ್ತನೇಯ ಶತಮಾನವು ಇನ್ನೇನು ಅಂತ್ಯವಾಗುತ್ತದೆ, ಮತ್ತು ಇಪ್ಪತೊಂದನೇಯ ಶತಮಾನವು ಪ್ರಾರಂಭವಾಗುವದರಲ್ಲಿದೆ.